ಜೂನ್ 9, 2005

**ಮೃತ ಠೇವಣಿದಾರರ ಬ್ಯಾಂಕ್ ಖಾತೆಗಳು:**
**ಬೇಡಿಕೆಗಳ ಇತ್ಯರ್ಥದಲ್ಲಿ ಅಡ್ಡಿ ಆತಂಕಗಳನ್ನು ನಿವಾರಿಸಿ:**
**ಬ್ಯಾಂಕುಗಳಿಗೆ ಆರ್‌ಬಿಐ ಸೂಚನೆ**

ಒಬ್ಬ ಠೇವಣಿದಾರನು ಮೃತನಾದರೆ ಆತನ ಹೆಸರಿನಲ್ಲಿರುವ ಹಣವನ್ನು ಶೀಘ್ರವಾಗಿ ಹಾಗೂ ತೊಂದರೆಯಿಲ್ಲದೇ ಇತ್ಯರ್ಥಮಾಡಲು, 'ಇಬ್ಬರಲ್ಲೊಬ್ಬರು ಅಥವಾ ಬದುಕುಳಿದಿರುವವರು' ಎಂಬ ಉಪಬಂಧದಡಿ ನಿರ್ವಹಿಸಲಾದ ಅಥವಾ ನಾಮನಿರ್ದೇಶನ ಸೌಲಭ್ಯವನ್ನು ಬಳಸಿಕೊಳ್ಳಲಾದ ಖಾತೆಗಳನ್ನು ಹೊಂದಿದ್ದ ಮೃತ ಖಾತೆದಾರರ ಖಾತೆಗಳಲ್ಲಿದ್ದ ಶಿಲ್ಕನ್ನು ಅತ್ಯಂತ ಕಡಿಮೆ ದಸ್ತಾವೇಜು ಪಡೆದು ಬಿಡುಗಡೆ ಮಾಡುವ ಸರಳ ವಿಧಾನವನ್ನನುಸರಿಸಬೇಕೆಂದು ಆರ್‌ಬಿಐ ಬ್ಯಾಂಕುಗಳಿಗೆ ತಿಳಿಸಿದೆ. ಮೃತ ಖಾತೆದಾರನ ಲೆಕ್ಕದಲ್ಲಿ ಜಮೆಯಿರುವ ಮೊತ್ತ ಎಷ್ಟೇ ಇದ್ದರೂ ಬದುಕುಳಿದವ ಅಥವಾ ನಾಮನಿರ್ದೇಶಿತನಿಗೆ ವಾರಸುದಾರ ಪ್ರಮಾಣ ಪತ್ರ, ನಿರ್ವಹಣಾ ಪತ್ರ (ಲೆಟರ್ ಆಫ್ ಅಡ್‌ಮಿನಿಸ್ಟ್ರೇಷನ್), ಉಯಿಲು ಪತ್ರ (ಪ್ರೊಬೇಟ್), ನಷ್ಟಭರ್ತಿಬಂಧ ಪತ್ರ ಅಥವಾ ಭದ್ರತೆಯನ್ನು ಹಾಜರುಪಡಿಸುವಂತೆ ಒತ್ತಾಯಿಸದೇ, ಮೃತ ಖಾತೆದಾರನ ಖಾತೆಯಲ್ಲಿ ಇರುವ ಶಿಲ್ಕು ಮೊತ್ತವನ್ನು 'ಇಬ್ಬರಲ್ಲೊಬ್ಬರು ಅಥವಾ ಬದುಕುಳಿದವನು' ಉಪಬಂಧದಡಿ ಸೂಚಿಸಲಾದ ಬದುಕುಳಿದವನಿಗೆ ಅಥವಾ ನಾಮನಿರ್ದೇಶಿತನಿಗೆ ನೀಡಬೇಕೆಂದು ಬ್ಯಾಂಕುಗಳಿಗೆ ಆರ್‌ಬಿಐ ಸಲಹೆ ನೀಡಿದೆ. ಜನರು ಎದುರಿಸುತ್ತಿರುವ ತೊಂದರೆಗಳು ಈ ವಿಧಾನದಿಂದ ನಿವಾರಣೆಯಾಗುವುದರಿಂದ 'ಇಬ್ಬರಲ್ಲೊಬ್ಬರು ಅಥವಾ ಬದುಕುಳಿದವರು' ಉಪಬಂಧದಡಿ ಅಥವಾ ನಾಮನಿರ್ದೇಶನ ಮಾಡುವ ಮೂಲಕ ಖಾತೆಯನ್ನು ನಿರ್ವಹಿಸುವುದರ ಲಾಭವನ್ನು ಖಾತೆದಾರರಿಗೆ ತಿಳಿಸಲು ವ್ಯಾಪಕ ಪ್ರಚಾರ ಹಾಗೂ ಮಾರ್ಗದರ್ಶನ ನೀಡಬೇಕೆಂದು ಬ್ಯಾಂಕುಗಳಿಗೆ ಸೂಚಿಸಲಾಗಿದೆ. 'ಇಬ್ಬರಲ್ಲೊಬ್ಬರು ಅಥವಾ ಬದುಕುಳಿದವರು' ಉಪಬಂಧ ಅಥವಾ ನಾಮನಿರ್ದೇಶನದ ಸೌಲಭ್ಯವಿಲ್ಲದ ಖಾತೆಗಳ ಸಂಬಂಧದಲ್ಲಿ, ಮೃತ ಖಾತೆದಾರನ ಖಾತೆಯಲ್ಲಿರುವ ಶಿಲ್ಕು ಮೊಬಲಗನ್ನು, ಇತರ ಯಾವುವೇ ದಾಖಲೆಗಳನ್ನು ನೀಡುವಂತೆ ಒತ್ತಾಯಿಸದೇ, ನಷ್ಟಭರ್ತಿ ಬಂಧ(ಇಂಡೆಮ್ನಿಟಿ) ಪತ್ರವನ್ನು ಪಡೆದು ಕನಿಷ್ಠ ಇಡು ಮಿತಿಯನ್ನು ನಿಗದಿಪಡಿಸಿ ಉಳಿದ ಮೊತ್ತವನ್ನು ಬಿಡುಗಡೆ ಮಾಡುವಂತೆ ಆರ್‌ಬಿಐ ಬ್ಯಾಂಕುಗಳಿಗೆ ತಿಳಿಸಿದೆ.

**ಆರ್‌ಬಿಐ ಇನ್ನೇನು ಹೇಳಿದೆ?**

ಭಾರತೀಯ ರಿಸರ್ವ್ ಬ್ಯಾಂಕು ನೀಡಿರುವ ಸೂಚನೆಗಳಲ್ಲಿ ಸಾವಧಿ ಠೇವಣಿ ಖಾತೆಗಳು, ಖಾತೆಗೆ ಬರುವ ಆದಾಯವನ್ನು ಪರಿಗಣಿಸುವುದು ಹಾಗೂ ಭದ್ರತಾ ಲಾಕರ್‌ಗಳಿಗೆ ಅವಕಾಶ – ಇವೂ ಸೇರುತ್ತವೆ.

**ಸಾವಧಿ ಠೇವಣಿ ಖಾತೆಗಳು:**

ಮೃತ ಠೇವಣಿದಾರನ ಸಾವಧಿ ಠೇವಣಿ ಸಂಬಂಧದಲ್ಲಿ, ಆತನ ಹೆಸರಿನಲ್ಲಿರುವ ಸಾವಧಿ ಠೇವಣಿಗಳ ಸಮಯಪೂರ್ವ ಸಮಾಪನಕ್ಕೆ ಯಾವುದೇ ಜುಲ್ಮಾನೆ ವಿಧಿಸದೇ ಅನುಮತಿ ನೀಡಬೇಕೆಂದು ರಿಸರ್ವ್ ಬ್ಯಾಂಕ್ ಬ್ಯಾಂಕುಗಳಿಗೆ ತಿಳಿಸಿದೆ. ಸಾವಧಿ ಠೇವಣಿ ಖಾತೆ ತೆರೆಯುವ ಅರ್ಜಿ ನಮೂನೆಯಲ್ಲಿಯೇ ಇಂಥ ಉಪಬಂಧವನ್ನು ಸೇರಿಸುವಂತೆ ಬ್ಯಾಂಕುಗಳಿಗೆ ಆರ್‌ಬಿಐ ತಿಳಿಸಿದೆ.

**ಠೇವಣಿದಾರನ ಮರಣಾನಂತರ ಸ್ವೀಕೃತವಾದ ವರಮಾನ:**

ಮೃತ ಠೇವಣಿದಾರನ ಖಾತೆಗೆ ಜಮೆಯಾಗುತ್ತ ಸಾಗುವ ಬಡ್ಡಿ ಅಥವಾ ಡಿವಿಡೆಂಡ್ ಸ್ವರೂಪದ ನಿರಂತರವಾಗಿ ಬರುವ ವರಮಾನದ ಸಂಬಂಧದಲ್ಲಿ ಆರ್‌ಬಿಐ ಕೆಲವು ಕ್ರಮಗಳನ್ನು ಸೂಚಿಸಿದ್ದು, ಕಾನೂನುಸಮ್ಮತ ವಾರಸುದಾರರಿಂದ ಪ್ರಾಧಿಕೃತವಾದ ತರುವಾಯ ಬ್ಯಾಂಕುಗಳು ಹಾಗೆ ಮಾಡಬಹುದು. ಬ್ಯಾಂಕುಗಳು 'ಮೃತ ಶ್ರೀ – – – – ಯವರ ಸ್ವತ್ತು' ಎಂಬ ಹೆಸರಿನ ಖಾತೆಯನ್ನು ತೆರೆದು, ಅಂಥ ಖಾತೆಗಳಿಂದ ಹಿಂತೆಗೆಯುವಿಕೆ ಇಲ್ಲವಾದರೆ ಎಲ್ಲ ಸಂದಾಯಗಳನ್ನು ಅಲ್ಲಿಗೆ ಜಮೆ ಮಾಡಬಹುದು. ಅಥವಾ ಜಮೆ ಮಾಡುವ ವ್ಯಕ್ತಿಗೆ 'ಖಾತೆದಾರನು ಮೃತನಾಗಿರುತ್ತಾನೆ' ಎಂದು ತಿಳಿಸಿ ಅಂಥ ಸಂದಾಯವನ್ನು ಹಿಂದಿರುಗಿಸಿ, ಹಾಗೆ ಹಿಂದಿರುಗಿಸಿದ ಬಗ್ಗೆ ಬದುಕುಳಿದವನು/ನಾಮ ನಿರ್ದೇಶಿತ/ಕಾನೂನು ಸಮ್ಮತ ವಾರಸುದಾರನಿಗೆ ತಿಳಿಸಿದರೆ ಬದುಕುಳಿದವನು/ನಾಮನಿರ್ದೇಶಿತ/ಕಾನೂನು ಸಮ್ಮತ ವಾರಸುದಾರನು ಸೂಕ್ತ ಫಲಾನುಭವಿಗೆ ಸಂದಾಯವನ್ನು ದೊರಕಿಸಿಕೊಡುವ ಕ್ರಮ ಕೈಗೊಳ್ಳಬಹುದು.

**ಲಾಕರ್ ನಿರ್ವಹಿಸಲು ಅವಕಾಶ:**
ಮೃತ ಠೇವಣಿದಾರನ ಭದ್ರತಾ ಲಾಕರ್ ಅಥವಾ ಭದ್ರತಾ ಅಭಿರಕ್ಷೆಯಲ್ಲಿರುವ ವಸ್ತುಗಳ ನಿರ್ವಹಣೆಗೆ ಮೃತ ಠೇವಣಿದಾರನ ಸಂಬಂಧದಲ್ಲಿ ಬದುಕುಳಿದವನಿಗೆ ಅಥವಾ ನಾಮನಿರ್ದೇಶಿತನಿಗೆ ಅವಕಾಶ ನೀಡುವಾಗಲೂ ಮೇಲಿನ ವಿಧಾನವನ್ನೇ ಅನುಸರಿಸಬೇಕೆಂದು ಆರ್‌ಬಿಐ ಬ್ಯಾಂಕುಗಳಿಗೆ ತಿಳಿಸಿದೆ.

**ಬೇಡಿಕೆ ಇತ್ಯರ್ಥಕ್ಕೆ ಕಾಲ ಮಿತಿ:**
ಮೃತ ಠೇವಣಿದಾರನ "ಇಬ್ಬರಲ್ಲೊಬ್ಬರು ಅಥವಾ ಬದುಕುಳಿದವನು" ಉಪಬಂಧದಡಿಯ ಬದುಕುಳಿದವನಿಗೆ ಅಥವಾ ನಾಮನಿರ್ದೇಶಿತನಿಗೆ ಮೃತ ಠೇವಣಿದಾರನ ಖಾತೆಗಳ ಬೇಡಿಕೆಗಳನ್ನು, ಬೇಡಿಕೆ ಸ್ವೀಕರಿಸಿದ 15 ದಿನಗಳೊಳಗಾಗಿ ಹಾಗೂ ಬೇಡಿಕೆದಾರನು ಠೇವಣಿದಾರನ ಮರಣದ ರುಜುವಾತನ್ನು ಹಾಗೂ ತನ್ನ ಬಗೆಗಿನ ಯುಕ್ತ ಮತ್ತು ತೃಪ್ತಿಕರ ಗುರುತನ್ನು ಸಲ್ಲಿಸಿದ ತರುವಾಯ ಇತ್ಯರ್ಥಗೊಳಿಸಿ ಹಣವನ್ನು ಸಂದಾಯಕ್ಕಾಗಿ ಬಿಡುಗಡೆ ಮಾಡುವಂತೆ ಆರ್‌ಬಿಐ ಬ್ಯಾಂಕುಗಳಿಗೆ ತಿಳಿಸಿದೆ. ಅಂಥ ಬೇಡಿಕೆದಾರರಿಗೆ ಯಾವುದೇ ಅನಪೇಕ್ಷಿತ ಅನುಕೂಲತೆ ಅಥವಾ ತೊಂದರೆ ಉಂಟಾದರೆ ಮೇಲ್ವಿಚಾರಕರ ತೀವ್ರ ಆಕ್ಷೇಪಕ್ಕೆ ಗುರಿಯಾಗಬೇಕಾಗುತ್ತದೆ ಎಂದು ಬ್ಯಾಂಕುಗಳಿಗೆ ತಿಳಿಸಲಾಗಿದೆ.

**ಬ್ಯಾಂಕುಗಳು ಇನ್ನೇನು ಮಾಡಬೇಕಾಗುತ್ತದೆ?**
ಬ್ಯಾಂಕುಗಳು ಕಾಲ ಕಾಲಕ್ಕೆ, ಮೃತ ಠೇವಣಿದಾರರು ಹಾಗೂ ಲಾಕರ್ ಬಾಡಿಗೆದಾರರು ಪಡೆದ ಖಾತೆಗಳ ಸಂಬಂಧದಲ್ಲಿ ಸ್ವೀಕರಿಸಿದ ಬೇಡಿಕೆಗಳ ಹಾಗೂ 15 ದಿನಗಳಿಗಿಂತ ಹೆಚ್ಚಿನ ಅವಧಿಯಿಂದ ಬಾಕಿ ಉಳಿದಿರುವ ಬೇಡಿಕೆಗಳ ಸಂಖ್ಯೆಯನ್ನು ಹಾಗೆ ಬಾಕಿ ಉಳಿದಿರುವುದರ ಕಾರಣದೊಂದಿಗೆ ತಮ್ಮ ಮಂಡಲಿಗಳ ಗ್ರಾಹಕ ಸೇವಾ ಸಮಿತಿಗೆ ವರದಿ ಮಾಡಬೇಕಾಗುತ್ತದೆ. ಆರ್‌ಬಿಐ ಭಾರತೀಯ ಬ್ಯಾಂಕುಗಳ ಸಂಘಕ್ಕೆ, ಮೃತ ಠೇವಣಿದಾರರ ಬೇಡಿಕೆಗಳ ಇತ್ಯರ್ಥಕ್ಕೆ ಸಂಬಂಧಿಸಿದಂತೆ ಬ್ಯಾಂಕುಗಳು ಅಳವಡಿಸಿಕೊಳ್ಳುವುದಕ್ಕಾಗಿ ವಿವಿಧ ಉದಾಹರಣೆಗಳಿರುವ ಒಂದು ಮಾದರಿ ನಿರ್ವಹಣಾ ವಿಧಾನವನ್ನು ರೂಪಿಸಬೇಕೆಂದು ಸೂಚಿಸಿದೆ. ಅಲ್ಲದೇ ನಾಮನಿರ್ದೇಶನ ಸೌಲಭ್ಯ ಹಾಗೂ "ಬದುಕುಳಿದವನು" ಸೌಲಭ್ಯದ ಉಪಬಂಧದ ಪ್ರಯೋಜನವನ್ನು ಠೇವಣಿ ಖಾತೆದಾರರಿಗೆ ಪ್ರಚುರಪಡಿಸಿ ಮಾರ್ಗದರ್ಶನ ನೀಡಬೇಕೆಂದು ಬ್ಯಾಂಕುಗಳಿಗೆ ತಿಳಿಸಲಾಗಿದೆ.

ಅಲ್ಪನಾ ಕಿಲ್ಲಾವಾಲಾ

ಮುಖ್ಯ ಪ್ರಧಾನ
ವ್ಯವಸ್ಥಾಪಕರು

ಪತ್ರಿಕಾ ಪ್ರಕಟಣೆ ಸಂ.: 2004–2005/1298